# ಅತ್ತ ದೀಪ ಭವ

ತಥಾಗತ ಬುದ್ಧ ಗುರು ಮರಣ ಶಯ್ಯೆಯಲ್ಲಿದ್ದಾಗ ಪರಮ ಶಿಷ್ಯನಾದ ಆನಂದನು 'ನೀವು ಹೋದ ನಂತರ ನಮಗೆ ಮಾರ್ಗದರ್ಶನ ಮಾಡುವವರು ಯಾರು? ನಾವು ಯಾರಲ್ಲಿ ಜ್ಞಾನದ ಬೆಳಕು ಕಾಣಬೇಕು' ಎಂದು ದುಃಖಿತನಾಗುತ್ತಾನೆ. ಪರಿನಿಬ್ಬಾಣದಲ್ಲಿರುವ ಬುದ್ಧ ಗುರು ಅತ್ಯಂತ ಸಮಚಿತ್ತದಿಂದ ನೆರೆದ ಎಲ್ಲ ಶಿಷ್ಯರನ್ನು ಕುರಿತು 'ಅತ್ತ ದೀಪ ಭವ' ಎಂದು ಹೇಳುತ್ತಾನೆ. ಇದರರ್ಥ ನಿಮಗೆ ನೀವೆ ಬೆಳಕಾಗಿರಿ. ಬೆಳಕು ಹೊರಗಿನಿಂದ ಪಡೆಯುವುದಲ್ಲ. ಒಳಗಿರುವ ಪ್ರಕಾಶವನ್ನು ಅರಿವಾಗಿಸಿಕೊಳ್ಳಬೇಕು ಎಂದಾಗುತ್ತದೆ. ಇದು ಬುದ್ಧ ಗುರುವಿನ ಕೊನೆಯ ಸಂದೇಶ. ಇಲ್ಲಿಂದ ಮೇಲೆ ಶಬ್ದವಿಲ್ಲ. ಪ್ರತಿಯೊಬ್ಬ ವ್ಯಕ್ತಿಯು ತನ್ನ ಅನುಭಾವಿಕ ಮಾರ್ಗವನ್ನು ತಾನು ಕಂಡುಕೊಳ್ಳಬೇಕು. ತಮ್ಮ ಉದ್ಧಾರಕ್ಕಾಗಿ ಇತರರ ಮೇಲೆ ಅವಲಂಬಿತರಾಗಬೇಕಿಲ್ಲ. ತನ್ನ ದಾರಿಯನ್ನು ತಾನು ಸವೆಸಬೇಕಲ್ಲದೆ ಇತರರ ಹೆಗಲ ಮೇಲೆ ಕುಳಿತು ನಡೆಯುವುದಲ್ಲ ಎನ್ನುತ್ತಾನೆ ಬುದ್ಧಗುರು. ಇದೀಗ ಬುದ್ಧ ಪೂರ್ಣಿಮೆ ಆಚರಿಸಿದ್ದೇವೆ. ಎಲ್ಲ ಜಯಂತಿಗಳ ಸುಗ್ಗಿಯಂತೆ ಭಿಕ್ಕು ಧರ್ಮಕ್ಕೂ ಉಕ್ಕು ಬರುತ್ತಿರುವ ಕಾಲವಿದು. ಬುದ್ಧತ್ವವು ಆಚರಣಾ ಮಾರ್ಗವೇ ಹೊರತು ಉತ್ಸವದ ಬಟ್ಟೆಯಲ್ಲ. ಜಗತ್ತನ್ನು ಕರುಣಾ ಮೈತ್ರಿ ಭಾವದಿಂದ ಇದಿರುಗೊಳ್ಳುವುದು ಮತ್ತು ತನ್ನೊಳಗಿನ ಪ್ರಜ್ಞೆಯನ್ನು ಎತ್ತರಿಸಿಕೊಳ್ಳುವುದೇ ಬುದ್ಧಮಾರ್ಗವಾಗಿದೆ. ನಡೆ–ನುಡಿಯೊಂದಾದ ಪಯಣವದು. ಅಲ್ಲಿ ಆತ್ಮ ಎಂಬುದಕ್ಕೆ ಅಸ್ತಿತ್ವವಿಲ್ಲ. ಅಂತೆಯೇ ಯಾವುದೂ ನಾಶವಾಗುವುದಿಲ್ಲ. ಎಲ್ಲವೂ ರೂಪ ಬದಲಿಸುತ್ತದೆ. ಆದ್ದರಿಂದ ಜಗತ್ತು ಮಿಥ್ಯೆಯೂ ಅಲ್ಲ. ನಿಗೂಢವೂ ಅಲ್ಲ ಎಂಬುದು ಬುದ್ಧಗುರುವಿನ ಕಾಣ್ಕೆ. ಇದನ್ನು ಅರಿತು ಅನುಸಂಧಾನಿಸುವ ಮೂಲಕವೇ ಬುದ್ಧ ಪೂರ್ಣಿಮೆಯನ್ನು ಅರ್ಥಪೂರ್ಣಗೊಳಿಸಬೇಕಿದೆ.

ಭಾರತದಲ್ಲಿ ನಿಸರ್ಗ ವಿವೇಕವನ್ನು ಅರಿವಾಗಿಸಿಕೊಟ್ಟವರಲ್ಲಿ ಬುದ್ಧ ಗುರು ಮೊದಲಿಗ. ವೈದಿಕ ಧಾರೆಗಳು ಲೋಕ ಸಮಸ್ತವನ್ನು ಕುರಿತು ಕಟ್ಟಿಕೊಂಡಿದ್ದ ಕಾಲ್ಪನಿಕ ಕಟ್ಟುಕಥೆಗಳನ್ನು ಸಾಧಾರವಾಗಿ ಒಡೆದು ವಾಸ್ತವದ ತಳಹದಿಯನ್ನು ತೆರೆದು ತೋರಿಸುವಲ್ಲಿ ಬುದ್ಧಚಿಂತನೆಗಳು ಕ್ರಾಂತಿಯನ್ನುಂಟು ಮಾಡಿದವು. ಲೋಕ ಮೀಮಾಂಸೆಯ ಕಾರಣ, ಪರಿಣಾಮಗಳು ಹಾಗೂ ಪರಿಹಾರಗಳನ್ನು ನೈಸರ್ಗಿಕ ಸತ್ಯಗಳ ಪರಿಧಿಗೆ ತಂದಿದ್ದಕ್ಕಾಗಿ ಬುದ್ಧ ಚಿಂತನೆಗಳು ಅನತಿ ಕಾಲದಲ್ಲಿಯೇ ತಾನು ಹುಟ್ಟಿದ ನೆಲವನ್ನು ಮೀರಿ ಜಗತ್ತಿನಾದ್ಯಂತ ಪಸರಿಸಿದವು. ಹೆಚ್ಚು ಕಡಿಮೆ ಏಷ್ಯಾಖಂಡವನ್ನು ಬೌದ್ಧ ಧರ್ಮ ಆವರಿಸಿಕೊಂಡು ಬಿಟ್ಟಿತು. ಆದ್ದರಿಂದಲೇ ಬುದ್ಧನನ್ನು ಬ್ರಿಟಿಷ್ ಕವಿ ಮತ್ತು ಗಂಭೀರ ಇತಿಹಾಸಕಾರ ಎಡ್ವಿನ್ ಅರ್ನಾಲ್ಡ್ 'ಏಷ್ಯಾದ ಬೆಳಕು' ಎಂದರು. ಈತ 'ದಿ ಲೈಟ್ ಆಫ್ ಏಷ್ಯಾ' ಎಂಬ ಮಹಾಕಾವ್ಯ ರಚಿಸಿದನು. ಗೌತಮ ಬುದ್ಧನ ಜನನ–ಮರಣಾದಿಗಳ ತೇದಿಯನ್ನು ನಿಖರವಾಗಿ ಗುರುತಿಸಲಾಗದಿದ್ದರೂ 'ಆಗಿ ಹುಣ್ಣಿಮೆ' ಅಂದರೆ ವೈಶಾಖ ಮಾಸದಲ್ಲಿ ಬರುವ ಹುಣ್ಣಿಮೆಯಂದೇ ಬುದ್ಧನ ಜನನ, ಜ್ಞಾನೋದಯ, ಪರಿನಿರ್ವಾಣ ಮೂರು ಸಂಭವಿಸಿದ್ದವು ಎಂದು ನಂಬಿಕೊಂಡು ಬರಲಾಗುತ್ತಿದೆ.

ಇಂದಿನ ನೇಪಾಳದ ಕಪಿಲವಸ್ತುವಿನ ಸಮೀಪವಿರುವ ಲುಂಬಿನಿ ಎಂಬಲ್ಲಿ ಶಾಕ್ಯ ವಂಶದ ಶುದ್ಧೋದನ ಮತ್ತು ಮಾಯಾದೇವಿ ದಂಪತಿಗೆ ಜನಿಸಿದ ಮಗುವಿಗೆ ಸಿದ್ಧಾರ್ಥ ಎಂದು ಹೆಸರಿಟ್ಟರು. ಹುಟ್ಟಿದಾಗ ರಾಜ ಜ್ಯೋತಿಷಿಗಳು ಸಿದ್ಧಾರ್ಥನು ದೊಡ್ಡ ಸನ್ಯಾಸಿಯಾಗುತ್ತಾನೆ ಎಂದು ಭವಿಷ್ಯ ನುಡಿದದ್ದರಿಂದ ಶುದ್ಧೋದನ ತನ್ನ ಮಗನಿಗೆ ಹೊರ ಪ್ರಪಂಚದ ಸಂಪರ್ಕವೇ ಇರದಂತೆ ಜೋಪಾನ ಮಾಡಿದನಂತೆ. ವಯಸ್ಸಿಗೆ ಬಂದೊಡನೆ ಸಿದ್ಧಾರ್ಥ ಒಮ್ಮೆ ಊರನ್ನು ಸಂದರ್ಶಿಸಲು ಹೊರಟಾದ ಮಾರ್ಗ ಮಧ್ಯದಲ್ಲಿ ರೋಗಿ, ಶವ, ಮುಪ್ಪಿನ ಮನುಷ್ಯನನ್ನು ಕಂಡು ಬದುಕು ನಿರರ್ಥಕ ಮತ್ತು ದುಃಖಮಯವಾಗಿದೆ ಎಂದು ತಿಳಿದೊಡನೆ ಎಲ್ಲವನ್ನು ತ್ಯಜಿಸಿ ಸನ್ಯಾಸಿಯಾಗಿ ಹೊರಟು ದೀರ್ಘ ಪರ್ಯಟನೆ ನಂತರ ಬೋಧಿ ವೃಕ್ಷದ ಅಡಿಯಲ್ಲಿ ತಪಸ್ಸು ಮಾಡುತ್ತಿರುವಾಗ ಇದ್ದಕ್ಕಿದ್ದಂತೆ ಒಂದು ದಿನ ಜ್ಞಾನೋದಯವಾಯಿತು. ಬೋಧಿ ವೃಕ್ಷದ ಕೆಳಗೆ ಸಿದ್ಧಾರ್ಥನಿಗೆ ಜ್ಞಾನೋದಯವಾದ್ದರಿಂದ ಬುದ್ಧಗುರು ಎಂಬ ನಾಮ ಬಂದಿತು ಎಂಬ ಕಥೆಯನ್ನು ಅನೂಚಾನವಾಗಿ ಹೇಳಿಕೊಂಡು ಬರಲಾಗುತ್ತಿದೆ. ಬುದ್ಧ ಮತ್ತು ಆತನ ಮೇಲೆ ಆಳವಾದ ಅಧ್ಯಯನ ಮಾಡಿದ ಭೀಮರಾವ ಅಂಬೇಡ್ಕರ್ ಈ ಕಥನವನ್ನು ಒಪ್ಪುವುದಿಲ್ಲ.

ಕಪಿಲವಸ್ತುವಿನ ಮಧ್ಯದಲ್ಲಿ ಹರಿಯುತ್ತಿದ್ದ ರೋಹಿಣಿ ನದಿಯ ನೀರು ಹಂಚಿಕೆ ವಿಷಯದಲ್ಲಿ ಶಾಕ್ಯ ಮತ್ತು ಕೋಲಿಯರಿಗೆ ವ್ಯಾಜ್ಯ ಶುರುವಾಯಿತು. ಎರಡೂ ದಂಡೆಗಳಗುಂಟ ಹಬ್ಬಿಕೊಂಡಿದ್ದ ಇವರು ರೋಹಿಣಿ ನೀರನ್ನು ಯಥೇಚ್ಛವಾಗಿ ಬಳಸಿಕೊಂಡು ಇದ್ದರು. ಒಮ್ಮೆ ಬರಗಾಲ ಬಿದ್ದು ನೀರಿನ ಸೆಳವು ಕಡಿಮೆಯಾಯಿತು. ನೀರಾವರಿಯ ಭೂಮಿಗಳಿಗೆ ಅಭಾವ ಉಂಟಾಗಿ ಬೆಳೆಗಳು ಒಣಗತೊಡಗಿದವು. ಶಾಕ್ಯರು ಹೆಚ್ಚಿನ ನೀರಿನ ಬಳಕೆಗೆ ಮುಂದಾದಾಗ ರಾಜಕುಮಾರ ಸಿದ್ಧಾರ್ಥನು ಎರಡೂ ಸಮುದಾಯಗಳು ಸಮಾನ ಹಂಚಿಕೆ ಮಾಡಿಕೊಳ್ಳಬೇಕೆಂಬ ಅಭಿಪ್ರಾಯ ಮಂಡಿಸಿದ. ಇದರಿಂದ ಕುಪಿತರಾದ ಶಾಕ್ಯ ಸಂಘದವರು ಸಿದ್ಧಾರ್ಥನು ಕುಲಕ್ಕೆ ಕಂಟಕನೆಂದು ಬಗೆದು ಆತನಿಗೆ ಮರಣದಂಡನೆ ಇಲ್ಲವೇ ಗಡಿಪಾರು ಮಾಡಬೇಕೆನ್ನುತ್ತಾರೆ. ಸಂಘದ ಆದೇಶ ಉಲ್ಲಂಘಿಸಲು ಸಾಧ್ಯವಿರದ ವ್ಯವಸ್ಥೆಯಲ್ಲಿ ಶುದ್ಧೋದನ ಎಲ್ಲಿಯಾದರೂ ಸರಿ ತನ್ನ ಮಗ ಜೀವದಿಂದಾದರೂ ಇರಲಿ ಎಂದು ಆಶಿಸಿ ರಾತೋರಾತ್ರಿ ಊರು ತ್ಯಜಿಸುವಂತೆ ಮಾಡಿದನೆಂದು ಬರೆಯುತ್ತಾರೆ. ನ್ಯಾಯ ನಿಷ್ಠುರತೆಗಾಗಿ ಸಿದ್ಧಾರ್ಥ ಸಂಸಾರ ತ್ಯಜಿಸಿದನೆಂಬುದು ಇನ್ನೊಂದು ಕಥನ.

ಆತ ಸಂಸಾರ ತ್ಯಜಿಸುವುದಕ್ಕೆ ಕಾರಣ ಏನೇ ಇರಲಿ, ಹೀಗೆ ಲೋಕೋತ್ತರವಾಗಿ ಗಮಿಸಿದ ಸಿದ್ಧಾರ್ಥನು ಕ್ರಮೇಣ ಬುದ್ಧನಾಗಿ ಪರಿವರ್ತನೆಗೊಂಡ ಹಂತ ಬಹಳ ಮುಖ್ಯವಾದುದು. ಅಲ್ಲಿಂದ ಆತ ಕಂಡುಕೊಂಡಿದ್ದ ನಾಲ್ಕು ಆರ್ಯಸತ್ಯಗಳು ಇವೆಯಲ್ಲ! ಇವು ಮೊದಲ ಬಾರಿಗೆ ಜಗತ್ತನ್ನು ಅದಿರುವ ವಾಸ್ತವ ಸ್ಥಿತಿಯಲ್ಲಿ ನೋಡುವಂತೆ ಮಾಡಿದವು. ಇಲ್ಲಿಯವರೆಗೆ ಸೃಷ್ಟಿ–ಸ್ಥಿತಿ–ಲಯಾದಿಗಳ ಬಗೆಗೆ ಕಾಲ್ಪನಿಕ ಅಂಶಗಳೇ ಮುನ್ನಲೆಗೆ ಬಂದು ಮನುಷ್ಯರು ಪರಸ್ಪರ ಶೋಷಣೆಯಲ್ಲಿ ತೊಡಗಿಕೊಳ್ಳುವಂತೆ ಮಾಡಿದ್ದವಲ್ಲದೆ ಇವೆಲ್ಲವೂ ನ್ಯಾಯಯುತ ಎಂದೆ ನಂಬಿಸಿಕೊಂಡು ಬರಲಾಗಿತ್ತು. ಹೀಗೆ ನಂಬಿಸಿಕೊಂಡು ಬರುತ್ತಿರುವ ಹಿಂದೆ ಕೆಲವು ಜನರ ಹಿತಾಸಕ್ತಿಗಳು ಅಡಗಿವೆ. ಇಂಥ ಅನರ್ಥಕಾರಿ ನಂಬಿಕೆಗಳು ಪ್ರಶ್ನಾತೀತವಾಗಿ ಚಾಲ್ತಿಗೊಳ್ಳಲೆಂದು ಕರ್ಮಸಿದ್ಧಾಂತವೆಂಬ ಅತಾರ್ಕಿಕ ವಾದವೊಂದನ್ನು ಸಮಾಜದಲ್ಲಿ ಕಸಿ ಮಾಡಲಾಗಿದೆ. ಬುದ್ಧಗುರು ಈ ಹುಸಿ ನಂಬಿಕೆಗಳ ಹಿಂದಿನ ಮರ್ಮವನ್ನು ತನ್ನ ನಡೆನುಡಿ ಸಮನ್ವಯದಿಂದ ತೆರೆದು ತೋರಿಸಿದನು. ಆದ್ದರಿಂದ ಬುದ್ಧ ಏಷ್ಯಾದ ಬೆಳಕು ಮಾತ್ರವಲ್ಲ ಆತ ಜಗತಿನ ಬೆಳಕು. ಸಾರ್ವತ್ರಿಕ ಬೆಳಕು ಎಂದು ಘೋಷಿಸಬೇಕಾಗಿದೆ. 800 ಕೋಟಿ ಹೆಚ್ಚು ಮಾನವ ಜೀವಿಗಳನ್ನು ಹೊಂದಿರುವ ಇಂದಿನ ಪ್ರಪಂಚಕ್ಕೆ ಬೇಕಾಗಿರುವುದು ಬೌದ್ಧ ಚಿಂತನಾ ಪ್ರಸ್ಥಾನಗಳೇ ಹೊರತು ಮನುಷ್ಯರ ಕ್ರಿಯಾಶೀಲತೆಯನ್ನು ನಿರಾಕರಿಸುವ ಕರ್ಮಸಿದ್ಧಾಂತವಲ್ಲ.

■ **ಮೀನಾಕ್ಷಿ ಬಾಳಿ**

## ಮಾತೇ ಮುತ್ತು

- ಕೃತಿ ಕೆಟ್ಟದಿದ್ದು, ಮನಸ್ಸು ಸದಾ ಕೆಡುಕು ಬಯಸುತ್ತಿದ್ದು, ಸಜ್ಜನರಂತೆ ಮುಖವಾಡ ಧರಿಸುತ್ತಿರುವ ಜನರ ಬಗ್ಗೆ ಎಚ್ಚರದಿಂದಿರಬೇಕು.
  —ದ.ರಾ. ಬೇಂದ್ರೆ
- ಪಾಪವಿದೆ ಪುಣ್ಯವಿದೆ, ನರಕವಿದೆ ನಾಕವಿದೆ, ಸ್ವೀಕರಿಸು ಓ ಗುರುವೇ ಅಂತರಾತ್ಮ.
  —ಕುವೆಂಪು
- ಅಂದಂದಿನ ಕೆಲಸವನ್ನು ಅಂದಂದು ಮಾಡಿ, ಅದರ ವಿಷಯವಾಗಿ ಬಹಳವಾಗಿ ಚಿಂತೆ ಮಾಡದೆ ಇರಬೇಕು. ಅದೇ ಒಳ್ಳೆಯ ಜೀವನ.
  —ಮಾಸ್ತಿ ವೆಂಕಟೇಶ್ ಅಯ್ಯಂಗಾರ್
- ಯುದ್ಧ ಮಾಡುವವನು ತಾನು ಯಾಕೆ ಯುದ್ಧ ಮಾಡುತ್ತಿದ್ದೇನೆ ಎನ್ನುವ ಕಾರಣವನ್ನು ಸ್ಪಷ್ಟವಾಗಿ ಪ್ರಾಮಾಣಿಕವಾಗಿ ತಿಳಿದಿರಬೇಕು.
  —ಎಸ್.ಎಲ್. ಭೈರಪ್ಪ
- ಅಂತರ್ಯದಲ್ಲಿ ತುಚ್ಛ ಮಾತುಗಳನ್ನಾಡುವುದರಲ್ಲಿ ಪುಕ್ಕಲು ಮಂದಿಗೇ ಪ್ರೌಢಿಮೆ ಹೆಚ್ಚು.
  ಕ್ಷೇಮೇಂದ್ರ